# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 249(174) |
| ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 13.09.2022 |
| ಉತ್ತರಿಸುವವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಹೊಸದಾಗಿ ಘೋಷಿಸಿರುವ ಪಟ್ಟಣ ಪಂಚಾಯತಿ ಮತ್ತು ಪುರಸಭೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು: (ವಿವರವಾದ ಮಾಹಿತಿ ನೀಡುವುದು) | ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಹೊಸದಾಗಿ ಘೋಷಿಸಿರುವ ಪಟ್ಟಣ ಪಂಚಾಯತಿ ಮತ್ತು ಪುರಸಭೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರವು ಈ ಕೆಳಕಂಡ ಯೋಜನೆಗಳಡಿ ಕ್ರಮವಹಿಸುತ್ತಿದೆ.<br>• **15ನೇ ಹಣಕಾಸು ಆಯೋಗದ ಅನುದಾನ:**<br>ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಹೊಸದಾಗಿ ಘೋಷಿಸಿರುವ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು 15ನೇ ಹಣಕಾಸು ಆಯೋಗದ ಅನುದಾನವನ್ನು ನಿಯಮಾನುಸಾರ ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗುತ್ತಿದೆ.<br>• **ಅಮೃತ್ 2.0 ಯೋಜನೆ ( 2021-22 ರಿಂದ 2025-26)**<br>ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ನೂತನವಾಗಿ ಘೋಷಿಸಿರುವ ಜಿಲ್ಲೆಯ ಪಟ್ಟಣ ಪಂಚಾಯಿತಿಗಳು ಮತ್ತು ಪುರಸಭೆಗಳನ್ನು ಆಯ್ಕೆ ಮಾಡಿ, ಸದರಿ ಪಟ್ಟಣಗಳಲ್ಲಿ<br>1. ಕುಡಿಯುವ ನೀರು ಸರಬರಾಜು<br>2. ಜಲಮೂಲಗಳ ಪುನಃಶ್ಚೇತನ<br>3. ಹಸಿರು ಜಾಗ ಮತ್ತು ಉದ್ಯಾನವನ ಅಭಿವೃದ್ಧಿ.<br>ಈ ಮೇಲಿನ ಕಾಮಗಾರಿಗಳನ್ನು ರೂ. 9230.00 ಕೋಟಿಗಳಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ. ಕಾಮಗಾರಿಗಳು ಕ್ರಿಯಾ ಯೋಜನೆಯ ತಯಾರಿಕೆ ಹಂತದಲ್ಲಿವೆ.<br>• **ಎಸ್.ಎಫ್.ಸಿ ಮುಕ್ತನಿಧಿ ಅನುದಾನ:** ಮೂಲಭೂತ ಸೌಕರ್ಯ ಕಲ್ಪಿಸಲು 1) ಕುಡಿಯುವ ನೀರು 2) ತರಕಾರಿ ಮಾರುಕಟ್ಟೆ 3)ಮಾಂಸ, ಕೋಳಿ ಹಾಗೂ ಮೀನು ಮಾರುಕಟ್ಟೆ 4)ಸಣ್ಣ ಪ್ರಮಾಣದ ಮಾರುಕಟ್ಟೆ ನಿರ್ಮಾಣ 5)ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮಾಡುವುದು 6)ಸ್ಮಶಾನ ಅಭಿವೃದ್ಧಿ 7)ಆಂತರಿಕ ರಸ್ತೆಗಳ ಮತ್ತು ಚರಂಡಿಗಳ ನಿರ್ಮಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ.<br>• ಎಸ್.ಎಫ್.ಸಿ. ಇತರೆ ಅವತರಣದಡಿಯ ಮುಕ್ತನಿಧಿಯ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಶೇ.24.10 ಕಲ್ಯಾಣ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅಭಿವೃದ್ಧಿಪಡಿಸುವುದು ಮತ್ತು ಫಲಾನುಭವಿಗಳನ್ನು ಆಯ್ಕೆ ಮಾಡಿ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ. |

- **ಎಸ್.ಎಫ್.ಸಿ ಕುಡಿಯುವ ನೀರು** : 1)ಕೊಳವೆ ಬಾವಿಗಳನ್ನು ಆಳಗೊಳಿಸುವುದು/ ಸ್ವಚ್ಛಗೊಳಿಸುವುದು 2) ಹೈಡ್ರೋಫ್ಯಾಕ್ಚರಿಂಗ್ 3) ನೀರು ಸರಬರಾಜು ಪೈಪುಗಳ ದುರಸ್ಥಿ/ ಬದಲಾವಣೆ 4) ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಹಾಗೂ ಪಂಪು ಮೋಟಾರ್ ಅಳವಡಿಸುವ ಕಾಮಗಾರಿ 5) ಕುಡಿಯುವ ನೀರು ಸರಬರಾಜು ಕಾಮಗಾರಿಗಳಿಗೆ ಅವಶ್ಯವಿರುವ ಪಂಪು ಮೋಟಾರ್, ಪೈಪ್ ಲೈನ್ ಮತ್ತು ಇತರೆ ಸಲಕರಣೆಗಳ ಸಂಗ್ರಹಣೆ ಮೊದಲಾದ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
- **ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4):**
  ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ರಡಿ ರಸ್ತೆ ಅಭಿವೃದ್ಧಿ ಕಾಮಗಾರಿಗಳು, ಮಳೆ ನೀರು ಚರಂಡಿ ಅಭಿವೃದ್ಧಿ ಕಾಮಗಾರಿಗಳು, ಕುಡಿಯುವ ನೀರು, ಒಳಚರಂಡಿ ಕಾಮಗಾರಿಗಳು ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

  **ಘನತ್ಯಾಜ್ಯ ವಸ್ತು ನಿರ್ವಹಣೆ:-** ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಯ ಹೊಸದಾಗಿ ಘೋಷಿಸಿರುವ ನಗರಸ್ಥಳೀಯ ಸಂಸ್ಥೆಗಳಿಗೆ ಸ್ವಚ್ಛ ಭಾರತ ಮಿಷನ್ ಯೋಜನೆಯಡಿಯಲ್ಲಿ ತಲಾ 20 ಲಕ್ಷಗಳನ್ನು ಘನತ್ಯಾಜ್ಯ ನಿರ್ವಹಣೆಗಾಗಿ ಅಗತ್ಯ ವಾಹನ ಖರೀದಿಸಲು ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ಆ) ನೂತನವಾಗಿ ಘೋಷಿಸಿದ ಪಟ್ಟಣ ಪಂಚಾಯತಿಗಳ ಸಂಖ್ಯೆ ಎಷ್ಟು; ಕಳೆದ 2 ವರ್ಷಗಳಲ್ಲಿ ಇವುಗಳಿಗೆ ಮಂಜೂರಾದ ಅನುದಾನ ಎಷ್ಟು;

**ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ಯಲ್ಲಿ ಮಂಜೂರಾದ ವಿವರ ಈ ಕೆಳಕಂಡಂತಿದೆ:**

| ಕ್ರ ಸಂ | ಜಿಲ್ಲೆಯ ಹೆಸರು | ಮೇಲ್ದರ್ಜೆಗೇರಿಸಿದ ಪಟ್ಟಣ ಪಂಚಾಯಿತಿಗಳು | ಹಂಚಿಕೆ ಮೊತ್ತ (ಲಕ್ಷಗಳಲ್ಲಿ) | ಕ್ರಿಯಾಯೋಜನೆ ಮೊತ್ತ (ಲಕ್ಷಗಳಲ್ಲಿ) |
|---|---|---|---|---|
| 1 | ಬೆಳಗಾವಿ | ಅಂಕಲಗಿ-ಅಕ್ಕತಂಗೇರಹಾಳ | 500.00 | 425.00 |
| | | ಕಾಗವಾಡ | 500.00 | 425.00 |
| | | ಮಚ್ಚೆ | 500.00 | 425.00 |
| | | ಪೀರನವಾಡಿ | 500.00 | 425.00 |
| | | ಯರಗಟ್ಟಿ | 500.00 | 425.00 |
| 2 | ವಿಜಯಪುರ | ಬಬಲೇಶ್ವರ | 500.00 | 425.00 |
| | | ತಿಕೋಟಾ | 500.00 | 425.00 |
| 3 | ಬಾಗಲಕೋಟೆ | ಲೋಕಾಪುರ | 500.00 | 419.09 |
| | | ಶಿರೂರ | 500.00 | 410.09 |

| | | |
|---|---|---|
| | | ಕಳೆದ 2 ವರ್ಷಗಳಲ್ಲಿ ನೂತನವಾಗಿ 09 ಪಟ್ಟಣ ಪಂಚಾಯಿತಿಗಳನ್ನು ಘೋಷಿಸಿದ್ದು, 15ನೇ ಹಣಕಾಸು ಆಯೋಗದಡಿ ಮಂಜೂರಾದ ಅನುದಾನದ ವಿವರಗಳನ್ನು **ಅನುಬಂಧ-01** ರಲ್ಲಿ ನೀಡಿದೆ.<br><br>ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಯ ಹೊಸದಾಗಿ ಘೋಷಿಸಿರುವ ನಗರಸ್ಥಳೀಯ ಸಂಸ್ಥೆಗಳಿಗೆ ಸ್ವಚ್ಛ ಭಾರತ ಮಿಷನ್ ಯೋಜನೆಯಡಿಯಲ್ಲಿ ತಲಾ 20 ಲಕ್ಷಗಳನ್ನು ಘನತ್ಯಾಜ್ಯ ನಿರ್ವಹಣೆಗಾಗಿ ಅಗತ್ಯ ವಾಹನ ಖರೀದಿಸಲು ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಹೊಸದಾಗಿ ಘೋಷಿಸಿದ ಪಟ್ಟಣ ಪಂಚಾಯಿತಿಗಳಿಗೆ 2022-23ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯ ಬಂಡವಾಳ ಆಸ್ತಿಗಳ ಸೃಜನೆ, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಶೇ.24.10 ಯೋಜನೆ ಹಾಗೂ ಎಸ್.ಎಫ್.ಸಿ. ಕುಡಿಯುವ ನೀರು ಯೋಜನೆಯಡಿ ಅನುದಾನ ಹಂಚಿಕೆಯಾಗಿ ಬಿಡುಗಡೆಯಾಗಿದ್ದು ವಿವರಗಳನ್ನು **ಅನುಬಂಧ-02** ರಲ್ಲಿ ನೀಡಿದೆ. 2021-22 ನೇ ಸಾಲಿನಲ್ಲಿ ಹೊಸದಾಗಿ ಸೃಜನೆಯಾದ ಸದರಿ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಹಂಚಿಕೆಯಾಗಿರುವುದಿಲ್ಲ. |
| ಇ) | ನೂತನವಾಗಿ ಘೋಷಿಸಿದ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಮತ್ತು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವಿವರವಾದ ಮಾಹಿತಿಯನ್ನು ನೀಡುವುದು). | ನೂತನವಾಗಿ ಘೋಷಿಸಿದ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಲ್ಲಿ ಖಾಯಂ ಮತ್ತು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ **ಅನುಬಂಧ-03** ರಲ್ಲಿ ನೀಡಿದೆ. |
| ಈ) | ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಖಾಯಂ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಭರ್ತಿ ಮಾಡಿಕೊಳ್ಳಲಾಗುವುದು? (ಮಾಹಿತಿ ನೀಡುವುದು) | ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

ಸಂಖ್ಯೆ: ನಅಇ 212 ಜಿಇಎಲ್ 2022(ಇ)

(signature)

ಎನ್.ನಾಗರಾಜ್ (ಎಂ.ಟಿ.ಬಿ)
ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಅನುಬಂಧ -1

LCQ 249 (174)

**Details of Allocation made for the newly upgraded ULBs during last two years under 15th FC grants**

Rs.in lakhs

| Sl.No. | District | ULB Name | Category | Allocation | | |
|---|---|---|---|---|---|---|
| | | | | 15th FC 2020-21 | 15th FC 2021-22 | 15th FC 2022-23 |
| 1 | Vijapura | Tikota | TP | - | 62.00 | 62.00 |
| 2 | Vijapura | Babaleshwar | TP | - | - | 74.00 |
| | | *Total* | | | **62.00** | **136.00** |
| 3 | Bagalkote | Lokapura | TP | - | 137.00 | 132.00 |
| 4 | Bagalkote | Shirur | TP | - | 134.00 | 128.00 |
| | | *Total* | | | **271.00** | **260.00** |
| 5 | Belagavi | Kagawada | TP | - | - | 117.00 |
| 6 | Belagavi | Yaragatti | TP | - | - | 84.00 |
| 7 | Belagavi | Machche | TP | - | - | 110.00 |
| 8 | Belagavi | Peeranwadi | TP | - | - | 86.00 |
| 9 | Belagavi | Ankalagi-Akkatangerahala | TP | - | - | 205.00 |
| | | *Total* | | | | **602.00** |

ಅನುಬಂಧ -1)

## ABSTRACT REPORT - CONSOLIDATED

Date=01-09-2022 — Rs. in Lakhs

| 1 | 2 | 3 | 4 | 6 | 7 | | | | | | |
|---|---|---|---|---|---|---|---|---|---|---|---|
| SL.NO | District | Name Of the Town | ULB Type | SFC Drinking Water | | SFC CAP_ASST | | SCSP | | TSP | |
| | | | | Grants Allocation | Grants Released | Grants Allocation | Grants Released | Grants Allocation | Grants Released | Grants Allocation | Grants Released |
| 1 | Bagalkote | Lokapur | TP | 2.5 | 2.5 | 43 | 21.5 | 10 | 5 | 4 | 2 |
| 2 | Bagalkote | Shirur | TP | 2.5 | 2.5 | 41 | 20.5 | 9 | 4.5 | 4 | 2 |
| | | **TOTAL** | | **5** | **5** | **84** | **42** | **19** | **9.5** | **8** | **4** |
| 3 | Belagavi | Ankalagi-Akkatangerhal | TP | 2.5 | 2.5 | 69 | 34.5 | 15 | 7.5 | 6 | 3 |
| 4 | Belagavi | Kagawad | TP | 2.5 | 2.5 | 39 | 19.5 | 9 | 4.5 | 4 | 2 |
| 5 | Belagavi | Machhe | TP | 2.5 | 2.5 | 35 | 17.5 | 8 | 4 | 3 | 0.9 |
| 6 | Belagavi | Peeranwadi | TP | 2.5 | 2.5 | 27 | 13.5 | 6 | 3 | 2 | 1 |
| 7 | Belagavi | Yaragatti | TP | 2.5 | 2.5 | 28 | 14 | 6 | 3 | 3 | 1.5 |
| | | **TOTAL** | | **12.5** | **12.5** | **198** | **99** | **44** | **22** | **18** | **8.4** |
| 8 | Vijapura | Babaleshwar | TP | 2.5 | 2.5 | 23 | 11.5 | 5 | 2.5 | 2 | 1 |
| 9 | Vijapura | Tikota | TP | 2.5 | 2.5 | 18 | 9 | 4 | 2 | 2 | 1 |
| | | **TOTAL** | | **5** | **5** | **41** | **20.5** | **9** | **4.5** | **4** | **2** |

CHIEF PROJECT OFFICER
Urban Poverty Alleviation Management Unit
Directorate of Municipal Administration
Bangalore

ಅನುಬಂಧ-3

| ಕ್ರ.ಸಂ. | ಜಿಲ್ಲೆಯ ಹೆಸರು | ನಗರ ಸ್ಥಳೀಯ ಸಂಸ್ಥೆ ಹೆಸರು | ಕಾರ್ಯನಿರ್ವಹಿಸುತ್ತಿರುವ ಖಾಯಂ ನೌಕರರ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಸಂಖ್ಯೆ | ಗ್ರಾಮ ಪಂಚಾಯಿತಿಯಿಂದ ಅನುಮೋದನೆಗೊಂಡ ನೌಕರರ ಸಂಖ್ಯೆ |
|---|---|---|---|---|---|
| 1. | ಬಾಗಲಕೋಟೆ | ಲೋಕಾಪುರ | 05 | 0 | 12 |
| | | ಶಿರೂರು | 04 | 05 | 14 |
| 2. | ವಿಜಯಪುರ | ತಿಕೋಟಾ | 11 | 11 | 0 |
| | | ಬಬಲೇಶ್ವರ | 06 | 14 | 10 |
| 3. | ಬೆಳಗಾವಿ | ಕಾಗವಾಡ | 2 | 11 | 08 |
| | | ಯರಗಟ್ಟಿ | 3 | 11 | 11 |
| | | ಪೀರನವಾಡಿ | 1 | 15 | 04 |
| | | ಮುಚ್ಚಿ | 4 | 16 | 04 |
| | | ಅಂಕಲಗಿ-ಅಕ್ಕತಂಗೇರಹಾಳ | 1 | 5 | 09 |
| | | **ಒಟ್ಟು** | 37 | 88 | 72 |

ಜಂಟಿ ನಿರ್ದೇಶಕರು (ಆಡಳಿತ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು